# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 42/2018

(ಫ್ರಾಸಾ-2 ಚಾಸಾ-2 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 23.01.2023.

| | | |
|---|---|---|
| ಸಾಕ್ಷಿದಾರರ ಹೆಸರು | - | ದಿನೇಶ |
| ತಂದೆ ಹೆಸರು | - | ನಾರಾಯಣಸ್ವಾಮಿ |
| ವಯಸ್ಸು | - | 24 ವರ್ಷ, |
| ಉದ್ಯೋಗ | - | ಚಾಲಕ |
| ವಾಸ | - | ಕೆ. ಮಲ್ಲಸಂದ್ರ, ಹೊಸಕೋಟೆ ತಾಃ |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ</u>

1. ಫ್ರಾಸಾ-1 ಇವರ ಪರಿಚಯ ಇದೆ. ಆತ ಚಾಸಾ-3 ಇವರ ಚಿಕ್ಕಪ್ಪ. ಚಾಸಾ-3 ಮತ್ತು ಪೃಥ್ವಿರಾಜ್ ಇವರ ಪರಿಚಯ ಇದೆ. ಚಾಸಾ-3, ಮೃತ ಪೃಥ್ವಿರಾಜ್ ಮತ್ತು ನಾನು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜಾತಿಯವರು. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇದೆ. 1 ನೇ ಆರೋಪಿ ಜತ್ತಿ ದ್ವಾರಕಮಯಿ ವಿಲ್ಲಾದ ಮಾಲೀಕರು. ಅವರ ಜಾತಿ ನನಗೆ ಗೊತ್ತಿಲ್ಲ. 2 ಮತ್ತು 3 ನೇ ಆರೋಪಿತರು ಪರಿಶಿಷ್ಟ ಜಾತಿಯ ಆದಿಕರ್ನಾಟಕ ಜಾತಿಯವರು. 1 ನೇ ಆರೋಪಿಯ ಮನೆಯ ಗಾರ್ಡನ್ ಕೆಲಸ ಎಂದು ದಿಃ24.05.2017 ರಂದು ಬೆಳಗ್ಗೆ 8 ಘಂಟೆ ಸಮಯದಲ್ಲಿ 2 ಮತ್ತು 3 ನೇ ಆರೋಪಿತರು ನನ್ನನ್ನು, ಮೃತ ಪೃಥ್ವಿರಾಜ್ ಮತ್ತು ಚಾಸಾ-3 ರಾಜುವನ್ನು ಕರೆದುಕೊಂಡು ಹೋಗಿದ್ದರು. ಮಧ್ಯಾಹ್ನ 02.30 ರವರೆಗೆ ಅಲ್ಲಿ ಕೆಲಸ ಮಾಡಿದೆವು.

2. ಮಧ್ಯಾಹ್ನ 02.30 ಕ್ಕೆ ಊಟ ಮಾಡಿಕೊಂಡು ಬಂದು ಪಿಟ್ ಕ್ಲೀನ್ ಮಾಡುವಂತೆ ಆರೋಪಿ ಮುರುಳಿ ನಮಗೆ ಹೇಳಿದರು. ಆರೋಪಿ ಪ್ರದೀಪ್ ಸಹ ಅಲ್ಲೇ ಇದ್ದರು. ಮಧ್ಯಾಹ್ನ 03.40 ಕ್ಕೆ ನಾನು ಮೊದಲು ಪಿಟ್ ನಲ್ಲಿ ಇಳಿದೆ. ವಾಸನೆಗೆ ನನಗೆ ತಡೆದುಕೊಳ್ಳಲು ಆಗಲಿಲ್ಲ. ನಾನು ಹೊರಗೆ ಬಂದೆ ಮತ್ತು ನನಗೆ ಇಳಿಯಲು ಆಗುವುದಿಲ್ಲ ಎಂದು ಹೇಳಿದೆ. ಆಗ 2 ಮತ್ತು 3 ನೇ ಆರೋಪಿತರು ಹತ್ತು ನಿಮಿಷ ಬಿಟ್ಟು ಇಳಿಯಿರಿ,

ಒಳಗೆ ಏರ್ ಎಲ್ಲಾ ಹೋಗುತ್ತದೆ ಎಂದು ಹೇಳಿದರು. ಪಿಟ್ ನಲ್ಲಿ ಇಳಿಯಲು ಏಣಿ ಹಾಕಿದ್ದರು. ನಂತರ ಪೃಥ್ವಿರಾಜ್ ಪಿಟ್ ನಲ್ಲಿ ಇಳಿದ ಅರ್ಧ ಇಳಿದ ಮೇಲೆ ಆತ ಪಿಟ್ ನ ಒಳಗೆ ಬಿದ್ದ. ಪೃಥ್ವಿರಾಜ್ ನ ಹಿಂದೆ ಚಾಸಾ-3 ರಾಜು ಸಹ ಇಳಿದಿದ್ದ. ಅವನು ಸಹ ಅರ್ಧ ಇಳಿದ ಮೇಲೆ ಪಿಟ್ ನ ಒಳಗೆ ಬಿದ್ದ. ಇಬ್ಬರಿಗೂ ತಲೆಗೆ ಪೆಟ್ಟಾಗಿ ಕೋಮಾಗೆ ಹೋದರು. ಹತ್ತು ನಿಮಿಷ ಆದ ಮೇಲೆ 2 ಮತ್ತು 3 ನೇ ಆರೋಪಿತರು ಅಲ್ಲಿಗೆ ಬಂದರು. ನಂತರ ಪೋಲಿಸರು ಮತ್ತು ಫೈಯರ್ ಇಂಜಿನ್ ನವರು ಬಂದರು. ಪೋಲಿಸರು ಮತ್ತು ಫೈಯರ್ ಇಂಜಿನ್ ನವರು ಪೃಥ್ವಿರಾಜ್ ಮತ್ತು ರಾಜುನನ್ನು ಪಿಟ್ ಒಳಗಿನಿಂದ ಹೊರಗೆ ತಂದರು. ಆ ರೀತಿ ತರುವಾಗ ಪಿಟ್ ನ ವಾಸನೆಗೆ ಅವರಿಗೂ ಸಹ ಆಗದೇ ಪೃಥ್ವಿರಾಜ್ ಎರಡು ಸಾರಿ ಮತ್ತೆ ಪಿಟ್ ಒಳಗೆ ಬಿದ್ದ. ನಂತರ ರಾಜು ಮತ್ತು ಪೃಥ್ವಿರಾಜ್ ನನ್ನು ಕೊಲೋಂಬಿಯಾ ಏಷಿಯಾ ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಆಗ ಸಮಯ ಸಂಜೆ 04.30 ಆಗಿತ್ತು. ನಾನು ಪ್ರಾಸಾ-1 ಇವರಿಗೆ ಫೋನ್ ಮಾಡಿ ತಿಳಿಸಿದೆ. ಆತ ಊರವರನ್ನು ಕರೆದುಕೊಂಡು ಆಸ್ಪತ್ರೆಯ ಹತ್ತಿರ ಬಂದರು. ಚಿಕಿತ್ಸೆ ಫಲಕಾರಿಯಾಗದೇ ಸುಮಾರು ಮೂರು ದಿವಸದ ನಂತರ ಪೃಥ್ವಿರಾಜ್ ತೀರಿಕೊಂಡ. ಚಾಸಾ-3 ಆಸ್ಪತ್ರೆಯಲ್ಲಿ ಒಂದು ವಾರದಿಂದ 15 ದಿನಗಳವರೆಗೆ ಇದ್ದ. ಪೋಲಿಸರು ನನ್ನ ಹೇಳಿಕೆ ಪಡೆದಿದ್ದಾರೆ.

3. ಘಟನೆಯಾದ ಸ್ಥಳ ಜತ್ತಿ ದ್ವಾರ್ವಕಮಯಿ ವಿಲ್ಲಾ ಇದೆ. ಪಿಟ್ ತೆಗೆಯಲು ಏಣಿ, ಬಕೇಟ್ ಕೊಟ್ಟಿದ್ದರು. ಪಿಟ್ ತೆಗೆಯಲು ಈಗ ತೋರಿಸಲಾದ ಬಕೇಟ್ ಅನ್ನೇ ನೀಡಿದ್ದರು. ಅದನ್ನು ಮು.ಮಾ-1 ಎಂದು ಗುರ್ತಿಸಲಾಯಿತು. ಈಗ ತೋರಿಸಿದ ಚಪ್ಪಲಿ ಪೃಥ್ವಿರಾಜ್ ನದ್ದು ಇದೆ. ಅದನ್ನು ಮು.ಮಾ-2 ಎಂದು ಗುರ್ತಿಸಲಾಯಿತು. ಪಿಟ್ 25 ಅಡಿ ಆಳ ಇತ್ತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎನ್ ಐ ಜಿ ವಕೀಲರಿಂದಃ**

4. ನಾನು ಡ್ರೈವಿಂಗ್ ಕೆಲಸ ಬಿಟ್ಟು ಬೇರೇನೂ ಕೆಲಸ ಮಾಡುತ್ತಿರಲಿಲ್ಲ. ದಿಃ24.05.2017 ಕ್ಕೂ ಮೊದಲು ಜತ್ತಿ ದ್ವಾರ್ವಕಮಯಿ ವಿಲ್ಲಾಗೆ ಯಾವುದೇ ಕೆಲಸಕ್ಕೆ ನಾನು ಹೋಗಿಲ್ಲ. ಆ ವಿಲ್ಲಾ ಲೇಔಟ್ ಗೆ ಸೆಕ್ಯೂರಿಟಿ ಇದೆ ಎಂದರೆ ಸರಿ. ಆ ಸೆಕ್ಯೂರಿಟಿ ಪಾಯಿಂಟ್ ನ ರಿಜಿಸ್ಟರ್ ನಲ್ಲಿ ನಮ್ಮ ಹೆಸರು ಬರೆದು ಒಳಗೆ ಹೋಗಬೇಕಾಗುತ್ತದೆ ಎಂದರೆ

ಸರಿ. 1 ನೇ ಆರೋಪಿ ಕೆಲಸಕ್ಕಾಗಲೀ ಮತ್ತೊಂದಕ್ಕಾಗಲೀ ಯಾವತ್ತೂ ನನ್ನನ್ನು ಸಂಪರ್ಕಿಸಿಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಕೆಲಸ ಮಾಡುವಾಗ ಅವರು ಬಂದು ಹೋದರು ಎನ್ನುತ್ತಾರೆ. ದಿಃ24.05.2017 ರಂದು ವಿಲ್ಲಾದಲ್ಲಿ ಕೆಲಸ ಮಾಡುವಾಗ ನಾನು 1 ನೇ ಆರೋಪಿಯನ್ನು ನೋಡಿಲ್ಲ ಎಂದರೆ ಸರಿ. ಆ ಲೇಔಟ್ ನಲ್ಲಿ ಎಷ್ಟು ವಿಲ್ಲಾಗಳಿವೆ ಮತ್ತು ಅವುಗಳನ್ನು ಯಾರು ಮೆಂಟೇನ್ ಮಾಡುತ್ತಾರೆ ಎಂಬ ಮಾಹಿತಿ ನನಗೆ ಇಲ್ಲ. ನಾನು ಯಾವುದೇ ಘಟನೆಯನ್ನು ನೋಡದೇ ಇದ್ದರೂ ಸಹ ಮೃತನ ಕುಟುಂಬದವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಕೂಲಿಯನ್ನು ಆರೋಪಿ ಮುರುಳಿ ಮತ್ತು ಪ್ರದೀಪ್ ರವರು ನೀಡಿದ್ದಾರೆ. ಲೇಔಟ್ Sewage treatement plant (STP) ಯಾರು ನಿರ್ವಹಣೆ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ.

**<u>ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಸ್ ಎನ್ ವಕೀಲರಿಂದಃ</u>**

5. ದಿಃ24.05.2017 ಕ್ಕೂ ಮೊದಲು ನಾನು, ಮೃತ ಪೃಥ್ವಿರಾಜ್ ಹಾಗೂ ಚಾಸಾ-3 ಟಾಟಾ ಎಸಿ ವಾಹನದ ಡ್ರೈವಿಂಗ್ ಕೆಲಸ ಮಾಡುತ್ತಿದ್ದೆವು. 2 ಮತ್ತು 3 ನೇ ಆರೋಪಿತರು ನಮ್ಮ ಊರಿಗೆ ಬಂದು ನಮಗೆ ಕೆಲಸಕ್ಕೆ ಬರಲು ಆ ದಿನ ಕರೆದರು. ಅವರು ಬೆಳಗ್ಗೆ ಸುಮಾರು 7.30 ಘಂಟೆಗೆ ಬಂದು ಕರೆದರು. 2 ಮತ್ತು 3 ನೇ ಆರೋಪಿತರು ಆಗ ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಮಗೆ ಡ್ರೈವಿಂಗ್ ಕೆಲಸ ಇಲ್ಲ, ಹಣದ ಅವಶ್ಯಕತೆ ಇದೆ, ಗಾರ್ಡನ್ ಕೆಲಸಕ್ಕೆ ಬರುತ್ತೇವೆ ಎಂದು ನೀವು ಮೂರು ಜನರಲ್ಲಿ ಆರೋಪಿ 2 ಮತ್ತು 3 ಇವರನ್ನು ಕೇಳಿದ್ದು ಯಾರು ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾವು ಕೇಳಿಲ್ಲ, ಅವರೇ ನಮ್ಮನ್ನು ಗಾರ್ಡನ್ ಕೆಲಸಕ್ಕೆ ಎಂದು ಕರೆದರು ಎನ್ನುತ್ತಾರೆ.

6. ವಿಲ್ಲಾದ ಹತ್ತಿರ ಹೋದಾಗ ಸಮಯ ಬೆಳಗ್ಗೆ 8 ಘಂಟೆ ಆಗಿತ್ತು. ಮಧ್ಯಾಹ್ನ 02.30 ರವರೆಗೆ ಗಾರ್ಡನ್ ಕೆಲಸ ಮಾಡಿ ಊಟ ಮಾಡಿದೆವು. ಗಾರ್ಡನ್ ಕೆಲಸ ಮಾಡಿದ ಮೇಲೆ ನಿಮ್ಮಲ್ಲಿ ಯಾರು ಡ್ರಿಂಕ್ಸ್ (ಮಧ್ಯಪಾನ) ಮಾಡಿದಿರಿ ಎಂದರೆ ಸಾಕ್ಷಿದಾರರು ಯಾರೂ ಮಾಡಿಲ್ಲ ಎನ್ನುತ್ತಾರೆ. ನಾವು ಮೂರು ಜನ ಗಾರ್ಡನ್ ಕೆಲಸ ಆದ ಮೇಲೆ

ಡ್ರಿಂಕ್ಸ್ (ಮಧ್ಯಪಾನ) ಮಾಡಿದ್ದೆವು ಎಂದರೆ ಸರಿಯಲ್ಲ. ಪಿಟ್ ಕ್ಲೀನಿಂಗ್ ಕೆಲಸ ಮಧ್ಯಾಹ್ನ 03.30 ಕ್ಕೆ ಪ್ರಾರಂಭಿಸಿದೆವು. ಘಟನೆಯಾದ ನಂತರ 1 ನೇ ಆರೋಪಿ ಅಲ್ಲಿಗೆ ಬಂದರು. ಎಷ್ಟೇ ಆಗಲೀ ನಾನು ಖರ್ಚು ಮಾಡುತ್ತೇನೆ, ಅವರ ಪ್ರಾಣ ಹೋಗುವುದು ಬೇಡ, ಚಿಕಿತ್ಸೆ ಕೊಡಿಸಿ ಎಂದು ಹೇಳಿದರು. ಪಿಟ್ ಅನ್ನು ನೋಡಬೇಕೆಂದು ನಾನು, ಮೃತ ಪೃಥ್ವಿರಾಜ್ ಹಾಗೂ ಚಾಸಾ-3 ನಾವೇ ಹೋಗಿದ್ದೆವು ಎಂದರೆ ಸರಿಯಲ್ಲ. ಡ್ರಿಂಕ್ಸ್ ಮಾಡಿ ನಾವೇ ಪಿಟ್ ನ ಕ್ಯಾಪ್ ಅನ್ನು ಓಪನ್ ಮಾಡಿದೆವು ಎಂದರೆ ಸರಿಯಲ್ಲ. ಆ ರೀತಿ ನಾವು ಕ್ಯಾಪ್ ಓಪನ್ ಮಾಡಿದ ಮೇಲೆ ಮೃತ ಪೃಥ್ವಿರಾಜ್ ಮತ್ತು ಚಾಸಾ-3 ಬಿದ್ದರು ಎಂದರೆ ಸರಿಯಲ್ಲ.

7. ಪೃಥ್ವಿರಾಜ್ ಮತ್ತು ಚಾಸಾ-3 ಪಿಟ್ ನಲ್ಲಿ ಬಿದ್ದ ಮೇಲೆ ನಾನು ಕಿರುಚಿಕೊಂಡೆ ಎಂದರೆ ಸರಿ. ಆಗ ಗಾರ್ಡನ್ ನಲ್ಲಿ ಕೆಲಸ ಮಾಡುತ್ತಿದ್ದ 2 ಮತ್ತು 3 ನೇ ಆರೋಪಿತರು ಅಲ್ಲಿಗೆ ಬಂದರು ಎಂದರೆ ಸರಿ. 2 ಮತ್ತು 3 ನೇ ಆರೋಪಿತರೇ ಆಂಬುಲೆನ್ಸ್ ಗೆ ಫೋನ್ ಮಾಡಿ ಮೃತನನ್ನು ಮತ್ತು ಚಾಸಾ-3 ಇವರನ್ನು ಕೊಲೊಂಬಿಯಾ ಏಷಿಯಾ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿ. 2 ಮತ್ತು 3 ನೇ ಆರೋಪಿತರು ನಮಗೆ ಪಿಟ್ ಅನ್ನು ಕ್ಲೀನ್ ಮಾಡುವಂತೆ ಹೇಳಿರಲಿಲ್ಲ ಎಂದರೆ ಸರಿಯಲ್ಲ. ಪಿಟ್ ಅನ್ನು ನೋಡುವ ಉದ್ದೇಶದಿಂದ ನಾವೇ ಹೋಗಿದ್ದು ಆಗ ಈ ಅವಘಡ ಸಂಭವಿಸಿದೆ ಎಂದರೆ ಸರಿಯಲ್ಲ. ಫ್ರಾಸಾ-1 ಇವರು ನೀಡಿದ ಫಿರ್ಯಾದಿಗೆ ಅನುಗುಣವಾಗಿ ಮತ್ತು ಅವರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಢೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು